**CC 511/2019**
**PW-1**

**ಸಾಕ್ಷಿಯನ್ನು ದಿನಾಂಕಃ 24.02.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ.ಜಿ.ಎಸ್ ರವರಿಂದಃ

1. ನಾನು ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮತ್ತು ಆರೋಪಿಯು ಒಂದೇ ಗ್ರಾಮದವರು ಎಂದರೆ ಸರಿ. ನಾನು ಗುರುದೇವ ಸರ್ವಿಸ್ ಸ್ಟೇಷನ್ ನ ಡೀಲರ್ ಎಂದರೆ ಸರಿ. ಸದರಿ ಸರ್ವಿಸ್ ಸ್ಟೇಷನ್ ಹೊರತು ಪಡಿಸಿ ನಾನು ಕೇಬಲ್ ವ್ಯವಹಾರ, ಬಟ್ಟೆ ಅಂಗಡಿ ವ್ಯವಹಾರ, ಟಿ.ವಿ ಮತ್ತು ಎಲೆಕ್ಟ್ರಾನಿಕ್ ವಸ್ತುಗಳನ್ನು ತೆಗೆದುಕೊಂಡು ಮಾರಾಟ ಮಾಡುತ್ತಿದ್ದೆನು. ಅದೇ ರೀತಿ ಬೈಕು ಮತ್ತು ಕಾರುಗಳನ್ನು ಖರೀದಿಸಿ ಮಾರಾಟ ಮಾಡುವ ವ್ಯವಹಾರವನ್ನು ಮಾಡುತ್ತಿದ್ದೆನು. ಸದರಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡುವ ಮಳಿಗೆಯು ಈಗ ಇರುವುದಿಲ್ಲ. ಸದರಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡುವ ವ್ಯವಹಾರವನ್ನು 2000 ನೇ ಇಸವಿಯಿಂದ 2009 ನೇ ಇಸವಿಯವರೆಗೂ ಮಾಡುತ್ತಿದ್ದೆನು. ಸದರಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡುವ ಬಗ್ಗೆ ಪರವಾನಗಿ ಪಡೆದುಕೊಂಡಿದ್ದೆನು. ಸಾಕ್ಷಿದಾರರು ಮುಂದುವರೆದು ನನ್ನ ಹೆಸರಿನಲ್ಲಿ ಪೂರ್ಣಿಮಾ ಎಕ್ಸಟೈಲ್ಸ ಅಂಗಡಿ ಇತ್ತು ಎಂದು ನುಡಿಯುತ್ತಾರೆ. ಅದೇ ರೀತಿ ಬೈಕು ಮತ್ತು ಕಾರುಗಳನ್ನು ಖರೀದಿಸಿ ಮಾರಾಟ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲಾತಿಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ.
2. ಗುರುದೇವ ಸರ್ವಿಸ್ ಸ್ಟೇಷನ್ ನ್ನು ನಾನು 2007 ನೇ ಇಸವಿಯಲ್ಲಿ ಪ್ರಾರಂಭಿಸಿರುತ್ತೇನೆ. ಆರೋಪಿಯು ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಈ ಪ್ರಕರಣ ದಾಖಲು ಮಾಡುವ ದುರುದ್ದೇಶದಿಂದ ಆರೋಪಿಯು ಲೇವಾದೇವಿ ವ್ಯವಹಾರ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪಿರ್ಯಾದಿಯಲ್ಲಿ ದಿನಾಂಕ 20.12.2013 ರಂದು 16 ಲಕ್ಷ ಮತ್ತು 8 ಲಕ್ಷ, ದಿನಾಂಕ 21.12.2013 ರಂದು 4 ಲಕ್ಷ ಹಣವನ್ನು ಆರೋಪಿಯಿಂದ ಪಡೆದುಕೊಂಡು ನಗದು ರೂಪದಲ್ಲಿ ಬಡ್ಡಿ

ಸಮೇತ ಹಿಂದಿರುಗಿಸಿದ್ದೇನೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ ಹಣವನ್ನು ಯಾವ ದಿನಾಂಕದಂದು ಹಿಂದಿರುಗಿಸಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಹೇಳಿದಂತೆ ಯಾವುದೇ ಹಣವನ್ನು ಆರೋಪಿಗೆ ಹಿಂದಿರುಗಿಸದೇ ಇರುವುದರಿಂದ ಸದರಿ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪಿರ್ಯಾದಿಯಲ್ಲಿ ಹೇಳಿದಂತೆ ದಿನಾಂಕ 12.02.2013 ರಂದು 5 ಲಕ್ಷ ಹಣವನ್ನು ಆರೋಪಿಯಿಂದ ಪಡೆದುಕೊಂಡು ಸದರಿ ಹಣವನ್ನು ಯಾವ ದಿನಾಂಕದಂದು ವಾಪಸ್ಸು ಮಾಡಿದ್ದೇನೆ ಎಂದು ನೆನಪಿಲ್ಲ. ಸದರಿ ಮೇಲೆ ತಿಳಿಸಿದ ಎಲ್ಲಾ ಹಣವನ್ನು ನಾನು ಆರೋಪಿಗೆ ವಾಪಸ್ಸು ಮಾಡಿದ ಬಗ್ಗೆ ದಾಖಲಾತಿಗಳು ಇರುತ್ತವೆ. ಸದರಿ ದಾಖಲಾತಿಗಳನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ನನ್ನ ಪಿರ್ಯಾದಿಯಲ್ಲಿ ಹೇಳಿದಂತೆ ಮೇಲಿನ ವ್ಯವಹಾರಗಳಿಗೆ ಖಾಲಿ ಸ್ಟಾಂಪ್ ಪೇಪರ್, ಸಹಿ ಮಾಡಿದ ಖಾಲಿ ಪ್ರಾಮಿಸರಿ ಪತ್ರ ಹಾಗೂ ಐ.ಎಮ್.ಜಿ ವೈಶ್ಯಾ ಬ್ಯಾಂಕಿನ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ಸದರಿ ದಾಖಲಾತಿಗಳು ಕಳೆದು ಹೋಗಿವೆ ಹುಡುಕಿ ಹಿಂದಿರುಗಿಸುತ್ತೇನೆ ಎಂದು ತಿಳಿಸಿದ್ದು ಸುಳ್ಳು ಎಂದರೆ ಸರಿಯಲ್ಲ.

3. ದಿನಾಂಕ 06.01.2014 ರಂದು ನಾನು ಆರೋಪಿಯಿಂದ ಎಷ್ಟು ಹಣವನ್ನು ಸಾಲವಾಗಿ ಕೇಳಿದ್ದೆ ಎಂದು ನನಗೆ ನೆನಪಿಲ್ಲ. ಸದರಿ ದಿನಾಂಕ 06.01.2014 ರಂದು ಆರೋಪಿಯು ನನಗೆ ಎಷ್ಟು ಹಣವನ್ನು ಸಾಲವಾಗಿ ನೀಡಿದ್ದರು ಎಂದು ನನಗೆ ನೆನಪಿಲ್ಲ. ಆರೋಪಿಯು ನಾನು ಹೇಳಿದಂತೆ ದಿನಾಂಕ 06.01.2014 ರಂದು ತಲಕಾಡು ಶಾಖೆಯ ಐ.ಎನ್.ಜಿ ವೈಷ್ಯಾ ಬ್ಯಾಂಕಿನ ನನ್ನ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಯಿಸಿರುತ್ತಾರೆ. ಸದರಿ ಹಣ ಎಷ್ಟು ಎಂದು ನನಗೆ ನೆನಪಿಲ್ಲ. ಸದರಿ ದಿನಾಂಕ 06.01.2014 ರಂದು ಆರೋಪಿಯು ನನಗೆ ಎಷ್ಟು ಹಣವನ್ನು ವರ್ಗಾಯಿಸಿದ್ದರು ಎಂದು ನಾನು ನನ್ನ ಪಿರ್ಯಾದಿಯಲ್ಲಿ ಮತ್ತು ನೋಟೀಸ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸದರಿ ದಿನಾಂಕ 06.01.2014 ರಂದು ಆರೋಪಿಯು ಯಾವ ಖಾತೆಯಿಂದ ಯಾವ ಖಾತೆಗೆ ಹಣ ವರ್ಗಾಯಿಸಿದ್ದರು

ಎಂದು ನಾನು ನನ್ನ ಪಿರ್ಯಾದಿಯಲ್ಲಿ ಮತ್ತು ನೋಟೀಸ್ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ರೀತಿ ಆರೋಪಿಯು ನನ್ನ ಖಾತೆಗೆ ಹಣ ವರ್ಗಾಯಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ವರ್ಗಾಯಿಸಿರುವುದಿಲ್ಲ. ನನ್ನ ಖಾತೆಗೆ ಯಾವುದೇ ಹಣ ಬಂದರೂ ಸಹ ನನ್ನನ್ನು ಹೊರತು ಪಡಿಸಿ ಬೇರೆ ಯಾರು ವ್ಯವಹರಿಸುತ್ತಿರಲಿಲ್ಲ. ಸದರಿ ಹಣ ವರ್ಗಾವಣೆ ಆದ ಬಗ್ಗೆ ನಾನು ನನ್ನ ಬ್ಯಾಂಕಿನಲ್ಲಿ ವಿಚಾರಿಸಿರುತ್ತೇನೆ. ಸಾಕ್ಷಿದಾರರು ಮುಂದುವರೆದು ಆರೋಪಿಯು ನನ್ನ ಖಾತೆಯಿಂದ ಹಣವನುನ ವಾಪಸ್ಸು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರೀತಿ ಆರೋಪಿಯು ಹಣವನ್ನು ನನ್ನ ಖಾತೆಯಿಂದ ಪಡೆದುಕೊಂಡ ಬಗ್ಗೆ ನಾನು ತಲಕಾಡು ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ಸದರಿ ದಾಖಲಾತಿಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ.

4. ಆರೋಪಿಗೆ ನಾನು ನೀಡಿದ್ದ ರೂ.90 ಲಕ್ಷದ ಚೆಕ್ಕು ಬೌನ್ಸ ಆದ ನಂತರ ಆರೋಪಿ ನನಗೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆರೋಪಿಯೇ ಖಾಲಿ ಚೆಕ್ಕಿನಲ್ಲಿ ತುಂಬಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆರೋಪಿ ನೀಡಿದ ನೋಟೀಸ್ ಗೆ ನಾನು ಪ್ರತ್ಯುತ್ತರ ನೀಡಿದ ಬಗ್ಗೆ ನನಗೆ ನೆನಪಿಲ್ಲ. ಸದರಿ ನೋಟೀಸ್ ನನಗೆ ತಲುಪುವವರೆಗೂ ರೂ.90 ಲಕ್ಷದ ಚೆಕ್ಕು ಬೌನ್ಸ ಆದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ.

<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಾಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

ಓ.ಹೇ.ಕೇ.ಸ. ಇದೆ.,

ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ, ಟಿ ನರಸಿಪುರ